



## ‘ಬಿಸಾಡಬೇಡಿ, ಮರುಬಳಸಿ’

ಕೊರೊನಾ ನಂತರದ ದಿನಗಳಲ್ಲಿ ಮನೆ ಮನೆಗೆ ಹೋಗಿ ಗ್ಯಾಸ್ ಸ್ಟೌ ರಿಪೇರಿ, ಮಿಕ್ಸಿ ರಿಪೇರಿ, ಸೋಫಾ ರಿಪೇರಿ ಮಾಡುವವರು ಹೆಚ್ಚಾಗಿದ್ದಾರೆ. ಆ ಸಾಲಿಗೆ ವಾಚ್, ಕ್ಯಾಲ್‌ಕ್ಯುಲೇಟರ್ ರಿಪೇರಿ ಮಾಡುವವರು ಸೇರಿದ್ದಾರೆ. ವಾಚ್, ಕ್ಯಾಲ್‌ಕ್ಯುಲೇಟರ್ ರಿಪೇರಿ ಮಾಡುವ ಹಿರಿಯ ವ್ಯಕ್ತಿ ಹಾಲೇಶ್(65) ಎಂಬುವವರು ಗಮನ ಸೆಳೆದರು.

ದಾವಣಗೆರೆಯ ಕೆ.ಬಿ. ಬಡಾವಣೆಯ ನಿವಾಸಿಯಾದ ಇವರು ಇಳಿವಯಸ್ಸಿನಲ್ಲೂ ವಾಚ್ ರಿಪೇರಿ ಮಾಡುವ ಕಾಯಕವನ್ನು ‘ಯೂಸ್ ಅಂಡ್ ಥ್ರೋ’ ಮನಸ್ಥಿತಿಯನ್ನು ಬದಲಾಯಿಸುವ ನಿಟ್ಟಿನಲ್ಲಿ ಮಾಡುತ್ತಿದ್ದಾರೆ. ಅದೂ ಮನೆ ಮನೆಗೆ ಹೋಗಿ. ಅವರೊಂದಿಗೆ ಮಾತಿಗಿಳಿದಾಗ... ‘‘ವಾಚ್‌ಗಳ ರಿಪೇರಿಗೆ ಮಾರುಕಟ್ಟೆಗೆ ಹೋದರೆ ಅವುಗಳ ಬಿಡಿ ಭಾಗಗಳು ಸಿಗುವುದಿಲ್ಲ’ ಎಂದು ಸಮಜಾಯಿಷಿ ನೀಡಿ ಹೊಸ ವಾಚ್‌ಗಳನ್ನು ಖರೀದಿಸಲು ಪ್ರೇರೇಪಿಸುತ್ತಾರೆ. ಈಗಿನ ‘ಯೂಸ್ ಅಂಡ್ ಥ್ರೋ’ ಮನಸ್ಥಿತಿಯವರು ಅದನ್ನೇ ನೆಪವಾಗಿಟ್ಟುಕೊಂಡು ಹೊಸದರತ್ತ ವಾಲುತ್ತಾರೆ. ಹೀಗಾಗಿ, ‘ಯೂಸ್ ಅಂಡ್ ರೀ ಯೂಸ್’ ಮನಸ್ಥಿತಿಯನ್ನು ಬೆಳೆಸಲು ಈ ಕಾಯಕದಲ್ಲಿ ತೊಡಗಿಕೊಂಡಿದ್ದೇನೆ’’ ಎಂದರು.

–ರಘುನಾಥರಾವ್ ತಾಪ್ಸೆ, ದಾವಣಗೆರೆ





## ಲಂಟಾನ ಪೊದೆ ಟ್ರ್ಯಾಕ್ಟರ್ ನುಂಗಿತ್ತಾ?

ಕೋಡಗನ ಕೋಳಿ ನುಂಗಿತ್ತಾ? ಎಂಬ ಹಾಡಿನಂತೆ ಲಂಟಾನ ಪೊದೆ ಟ್ರ್ಯಾಕ್ಟರ್ ನುಂಗಿತ್ತಾ? ಎನ್ನುವಂತಿದೆ ಈ ಚಿತ್ರ. ಯಾವುದೋ ಕಾರಣಕ್ಕೆ ವರ್ಷಗಟ್ಟಲೆ ಚಲಿಸದೆ ನಿಂತಲ್ಲೇ ನಿಶ್ಚಲಗೊಂಡಿದ್ದ ಟ್ರ್ಯಾಕ್ಟರ್ ಒಂದನ್ನು ಅಷ್ಟಪದಿಯ ಬಾಹುಗಳು ಬೇಟೆಯನ್ನು ಆವರಿಸಿದಂತೆ ಆವರಿಸಿ ನುಂಗಹೊರಟಿದೆ ಈ ಲಂಟಾನ ಪೊದೆ. ಅಷ್ಟಕ್ಕೂ ಹೀಗೆ ದಟ್ಟವಾಗಿ ಬೆಳೆದಿರುವ ಈ ಪೊದೆಯ ಬೇರು ಟ್ರ್ಯಾಕ್ಟರಿನ ತಳಭಾಗದಿಂದ ವಾಹನದ ಹಿಂಭಾಗಕ್ಕೆ ಹೊರಟು ಅಲ್ಲಿಂದ ಮುಂಭಾಗಕ್ಕೆ ಚಾಚಿಕೊಂಡಿದೆ. ಈ ಟ್ರ್ಯಾಕ್ಟರ್ ತನ್ನ ವೃತ್ತಿ ಬದುಕಿನ ಉತ್ತುಂಗದಲ್ಲಿ ಅದೆಷ್ಟೋ ಕಳೆಗಿಡಗಳನ್ನು ಬಗೆ ಬಗೆಯ ಪೊದೆಗಳನ್ನು ಬೇಟೆಯಾಡಿ ಬುಡಮೇಲು ಮಾಡಿತ್ತೋ ತಿಳಿಯದು. ಆದರೆ ಕಾಲದ ತಿರುಗಣೆಯಲ್ಲಿ ಅದರ ಈ ಹಿಂದಿನ ಶೌರ್ಯ ಸಾಹಸಗಳೆಲ್ಲವು ಈ ಲಂಟಾನ ಪೊದೆಯ ಅಡಿಯಲ್ಲಿ ತುಕ್ಕು ಹಿಡಿದು ಮಣ್ಣಾಗುತ್ತಿವೆ.

ಅಂದಹಾಗೆ ಈ ವಿದೇಶಿ ಪ್ರಜೆ ಲಂಟಾನ, ನಮ್ಮ ದೇಶಿ ಅರಣ್ಯ ಪ್ರದೇಶಕ್ಕೆ ಮಾರಕವಾಗಿ ಪರಿಣಮಿಸಿದೆ. ತನ್ನ ಉತ್ತಮ ಉರುವಲು ಶಕ್ತಿಯಿಂದ ಕಾಡ್ಗಿಚ್ಚಿನ ವೇಳೆ ವ್ಯಾಪಕವಾಗಿ ಬೆಂಕಿ ಪಸರಿಸಿ ಹಾಗೂ ಇತರೆ ಸಸ್ಯಗಳು ಬೆಳೆಯದಂತೆ ಅಬ್ಬರವಾಗಿ ಹಬ್ಬಿ ಹಸುರನ್ನು ನುಂಗಿನೊಣೆಯುತ್ತಿದೆ. ಹೆಚ್ಚು ನೀರು ನಿರೀಕ್ಷಿಸದ ಎಂತಹ ಪ್ರತಿಕೂಲ ಪರಿಸ್ಥಿತಿಯಲ್ಲೂ ಬೆಳೆಯಬಲ್ಲ ಸಸ್ಯವಾಗಿರುವುದರಿಂದ ಕಾಡುನಾಡಿನಲ್ಲಿ ಇದರ ಜನಸಂಖ್ಯೆ ಮಿತಿಮೀರಿದೆ. ಪೂರ್ಣಚಂದ್ರ ತೇಜಸ್ವಿಯವರ ಕಾದಂಬರಿಯಲ್ಲೂ ಸ್ಥಾನಪಡೆಯುವಷ್ಟು ಜನಪ್ರಿಯತೆ ಹೊಂದಿರುವ ಈ ಪೊದೆಯನ್ನು ರೈತರು ಜೀವಂತ ಬೇಲಿಯಾಗಿ, ಪೀಠೋಪಕರಣಗಳಿಗಾಗಿ ಹಾಗೂ ಉರುವಲಿಗಾಗಿಯೂ ಬಳಸುತ್ತಿದ್ದಾರೆ.

–ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ